

ಸೇರುತ್ತವೇನೋ! ಆಗಾಗ್ಗೆ 'ಲೊಚ ಲೊಚ' ಸಂದೇಶ. ಹಲವು ಹಲ್ಲಿಗಳು ಜೊತೆಜೊತೆಯಾಗಿ 'ಲೊಚ ಲೊಚಾಯಿಸಿದರೆ' ಒಂಥರಾ ತಾಳವಾದ್ಯ ಕಛೇರಿ. ಪ್ರಾಯಶಃ ಅದು ಅವುಗಳ ಮಾತುಕತೆ ಕೂಡ – ಎಲ್ಲಿ ಹೋಗಿದ್ದೆ, ಏನು ತಿಂದೆ, ಯಾರು ಸಿಕ್ಕಿದ್ರು, ಎಲ್ಲಿದ್ದೆ, ಯಾಕೆ ಲೇಟಾಯ್ತು ಬರೋದು ಅಂತಾನೋ, ಏನೋ ಇರಬಹುದು.

ಹೀಗೆ ನಮ್ಮನೆಗೆ ಸಂಜೆ ಬರೋ ಈ ಹಲ್ಲಿಗಳೂ ತಮ್ಮ ತಮ್ಮದೇ ಜಾಗ ನೋಡಿಕೊಂಡಿವೆ. ತಮ್ಮ ಜಾಗದಲ್ಲಿ ಬೇರೆಯವು ಕೂತಿದ್ರೆ ಅಥವಾ ಬಂದು ತೊಂದ್ರೆ ಕೊಟ್ಟರೆ ಓಡಿಸುತ್ವೆ. ಕೆಲವು ಹಲ್ಲಿಗಳು ಬಾಗಿಲುವಾಡದ ಮೇಲೇ ಠಿಕಾಣಿ ಹೂಡಿರುತ್ವೆ. ಇನ್ನು ಕೆಲವು ಪೋರ್ಟಿಕೋದ ಮಧ್ಯದ ದೀಪದ ಹತ್ತಿರ ತಪಸ್ಸಿನಲ್ಲಿರುತ್ತವೆ. ಕೆಲವಕ್ಕೆ ಬಿಡುವಿಲ್ಲದ ಓಡಾಟ. ನಿಲ್ಲುವುದೇ ಇಲ್ಲ. ಕೆಲವು ಒಂದನ್ನೊಂದು ಅಟ್ಟಿಕೊಂಡು ಆಟವೋ ಜಗಳವೋ ಸರಸವೋ ಗೊತ್ತಿಲ್ಲ.

ಇನ್ನು ಅವುಗಳ ಬಣ್ಣ, ಗಾತ್ರದಲ್ಲೂ ವೈವಿಧ್ಯ. ಹುಲಿಗಳ ಬಗ್ಗೆ ಹೇಳ್ತಾರಲ್ಲ, ಬಂಗಾಲದ ಹುಲಿ, ಪಂಜಾಬಿನ ದೊಡ್ಡ ಹುಲಿ, ಹಿಮಾಲಯದ ಹುಲಿ, ಆಂಧ್ರ, ಕರ್ನಾಟಕ ತಮಿಳುನಾಡಿನ ಹುಲಿ, ಹಾಗೆಯೇ ಈ ಹಲ್ಲಿಗಳಲ್ಲೂ ವೈವಿಧ್ಯವಿದೆ. ಸಣ್ಣಹಲ್ಲಿ, ದೊಡ್ಡ ಹಲ್ಲಿ, ಚುರುಕು ಹಲ್ಲಿ, ಮುರುಕು ಹಲ್ಲಿ ಹೀಗೇ ಏನೇನೋ. ಆ ವೈವಿಧ್ಯವನ್ನು ನೋಡಿಯೇ ಆನಂದಿಸಬೇಕು! ನಿಮಗೆ ಅಚ್ಚ ಬಿಳಿಯ ಹಲ್ಲಿ ಕಂಡಂತೆಯೇ ಕಡುಕಪ್ಪು ಹಲ್ಲಿ, ಮೈಮೇಲೆ ಪಟ್ಟೆಗಳಿರುವ ಹಲ್ಲಿಗಳು, ಚುಕ್ಕೆಗಳಿರುವ ಹಲ್ಲಿಗಳು, ಕೊಂಚ ಹಸಿರು, ನೀಲಿ, ಕೆಂಪು, ನಮ್ಮ ಪುಟ್ಟ ಮಗಳು ಹೇಳುವಂತೆ ಪಿಂಕು ಪಿಂಕು ಬಣ್ಣವಿರುವ ಹಲ್ಲಿಗಳೂ ಕಂಡುಬರುತ್ತವೆ. ಒಮ್ಮೊಮ್ಮೆ ಅದೆಲ್ಲಿಂದಲೋ ಮೈಪೂರಾ ಪಾರದರ್ಶಕವೋ ಎಂಬಂತಿರುವ ಹಲ್ಲಿಗಳೂ ಬರುತ್ತವೆ. ಅದೆಷ್ಟು ಪಾರದರ್ಶಕವೆಂದರೆ, ಗಾಜಿನ ದೇಹವೆಂಬಂತೆ ಅವುಗಳ ಮೈಯೊಳಗಿನ ರಕ್ತನಾಳಗಳೂ ಕಾಣುವಷ್ಟು!

ಹಲ್ಲಿಗಳು ಹುಳುಗಳನ್ನು ಹಿಡಿಯುವ ಚಾಕಚಕ್ಯತೆಯ ಸೊಗಸು ನೋಡಬೇಕು. ದೂರದಲ್ಲಿರುವ ಹುಳುಗಳನ್ನ ಗುರುತಿಸಿ, ನಿಧಾನ ಹೆಜ್ಜೆ ಹಾಕಿ (ಥೇಟ್ ಬೆಕ್ಕು ಹುಲಿ ತರಹಾನೇ) ಸ್ವಲ್ಪಸ್ವಲ್ಪವೇ ಹತ್ತಿರಾಗಿ ಆಮೇಲೆ ಕ್ಷಣಾರ್ಧದಲ್ಲಿ ಹುಳುವಿನ ಮೇಲೆರಗಿ ಸ್ವಾಹ ಮಾಡುವ ಕಲೆ ಬಹಳಷ್ಟು ಅಭ್ಯಾಸ ಮಾಡಿಯೇ ಬಂದಿರಬೇಕು. ಆದ್ರೆ, ಯಾವುದೇ ಅಮ್ಮ ಅಥವಾ ಅಪ್ಪ, ತಾತ–ಅಜ್ಜಿ ಹಲ್ಲಿ, ತಮ್ಮ ಮಕ್ಕಳಿಗೆ ಬೇಟೆಯ ವಿದ್ಯೆಗಳನ್ನು ಹೇಳಿಕೊಡುವುದನ್ನು ನಾನು ನೋಡಿಲ್ಲ. ಅದೂ ಒಂದು ರೀತಿ ವಂಶಪಾರಂಪರ್ಯ ಕೌಶಲ್ಯ. ಪ್ರತಿಯೊಂದು ಮರಿ ಕೂಡ ಸ್ವಾನುಭವದಿಂದ ಎಲ್ಲವನ್ನೂ ಸ್ವಯಂ ಆಗಿ ಕಲಿತು ಬದುಕು ರೂಢಿಸಿಕೊಳ್ಳಬೇಕು. ಒಮ್ಮೊಮ್ಮೆ ಕೆಲವು ಹಲ್ಲಿಗಳು ಇರುವೆ ಗೂಡುಗಳನ್ನ ಹುಡುಕಿಕೊಂಡು ಅಲ್ಲೇ ಬಿಡಾರ ಹೂಡಿಬಿಟ್ಟಿರುತ್ತವೆ. ಅದೊಂದು ತರಹ ಮೋಸ. ಗೂಡಿನಿಂದ ಹೊರಬರುವ ಇರುವೆಗಳನ್ನೆಲ್ಲಾ ಕಳ್ಳಗಿಂಡಿಯಿಂದ ಬಂದವರನ್ನೆಲ್ಲಾ ಚೆಂಡಾಡಿದಂತೆ ಈ ಹಲ್ಲಿಗಳು ಗುಳುಂ ಮಾಡುವುದು ಸರಿಯಲ್ಲ ಅನ್ನೋದು ನನ್ನ ವಾದ.

ಹೊಸ ಮನೆಗೆ ಬಂದ ಮೇಲೆ ಇಷ್ಟೆಲ್ಲಾ ಹೊಸ ಹೊಸ ಹಲ್ಲಿಗಳನ್ನ ನೋಡ್ತಿರೋ ನನಗೆ ಒಂದಲ್ಲಾ ಒಂದು ದಿನ ಪೂರ್ಣಚಂದ್ರ ತೇಜಸ್ವಿಯವರ 'ಕರ್ವಾಲೋ' ಅವರು ಹುಡುಕಿದ ಹಾರೋ ಹಲ್ಲೀನೂ ಬಂದೇ ಬರುತ್ತೆ ಅನ್ನೋ ಆಸೆ. 'ಹಲ್ಲಿಗಳೆಷ್ಟು ರೀತಿ' ಎನ್ನುವ ಅನ್ವೇಷಣೆಗೆ ಕಾರಣವಾಯಿತು. 'ಭಾರತೀಯ ಹಲ್ಲಿಗಳು' ಅಂತ ಯಾರಾದರೂ ಬರೆದಿರಲೇಬೇಕೆನ್ನುವ ನನ್ನ ನಂಬಿಕೆಗೆ ಖಂಡಿತಾ ಮೋಸವಾಗಲಿಲ್ಲ. ಟಿ.ಎನ್.ಎಸ್. ಮೂರ್ತಿ ಅನ್ನುವವರು ಎಷ್ಟೋ ವರ್ಷಗಳ ಹಿಂದೆ ಬರೆದೇಬಿಟ್ಟಿದ್ದಾರೆ! ಮುಖ್ಯವಾಗಿ ಎಂಟು ಹಲ್ಲಿ ಕುಟುಂಬಗಳಂತೆ. ಅವುಗಳಲ್ಲಿ ಒಂದೊಂದರಲ್ಲೂ ಹತ್ತಾರು ವಿಧಗಳಂತೆ. ಅವುಗಳ ಬಾಲ, ತಲೆ, ಕಾಲು, ಪಕ್ಕೆ–ರೆಕ್ಕೆ, ಆಹಾರಾಭ್ಯಾಸ, ಹಲ್ಲುಗಳ ಬಳಕೆ, ಮೂಗಿನಿಂದ ಸಿಂಬಳ ಸಿಡಿಸುವ ಬಗೆ, ಶಬ್ದ ಮಾಡುವ ರೀತಿ, ಮೈಬಣ್ಣ, ಚುಕ್ಕೆ, ಪಟ್ಟೆ, ನುಣುಪು, ಒರಟು ಚರ್ಮ, ಹಗಲು ಇರುಳು ಓಡಾಟದ ಅಭ್ಯಾಸ, ಇರುವ ಸ್ಥಳಗಳು, ಓಡಾಡುವ ವೇಗ, ಮೊಟ್ಟೆ ಇಡುವ ಸಂಖ್ಯೆ, ಮೊಟ್ಟೆಗಳ ದಪ್ಪ, ರೂಪ ಇವೆಲ್ಲದರ ಮೇಲೆ ವಿಭಾಗಗಳಂತೆ. ಇಷ್ಟರ ಮೇಲೆ ನಾವಂದುಕೊಂಡಂತೆ ಎಲ್ಲವೂ ಹಾವಿನ ತರಹ ತಣ್ಣನೆಯ ರಕ್ತದ್ದೇ ಆಗಿರಬೇಕಿಲ್ಲವಂತೆ. ಬಿಸಿ ರಕ್ತದ ಹಲ್ಲಿಗಳೂ ಇವೆಯಂತೆ! ಬಿಸಿ ರಕ್ತದ ಪ್ರಾಣಿಗಳು, ಮನುಷ್ಯರ ದೇಹದೊಳಗಿನಿಂದಲೇ ಶಾಖ ಉತ್ಪತ್ತಿ ಆಗುವಂತೆ ತಣ್ಣಗಿನ ರಕ್ತದ ದೇಹದ ಹಲ್ಲಿಗಳ ದೇಹದಲ್ಲಿ ಶಾಖ ಉತ್ಪತ್ತಿ ಆಗುವುದಿಲ್ಲ. ಅದಕ್ಕೆ ಈ ಜಾತಿಯ ಸರೀಸೃಪಗಳು ಬಿಸಿಲಲ್ಲಿ ಮೈಕಾಯಿಸುವುದು.

ಮೂರ್ತಿಯವರು ಬರೆದಿರುವಂತೆ ಬಹಳ ಮುಖ್ಯವಾಗಿ ಹಲ್ಲಿಗಳು ಹುಳು ಹುಪ್ಪಡಿ ತಿನ್ನುವುದರಿಂದ ಅದೆಷ್ಟೋ ರೋಗಗಳು ಹರಡುವುದನ್ನು ತಡೆಯಲು ಸಾಧ್ಯವಾಗಿದೆ. ಹೊಲ ಗದ್ದೆ, ತೋಟ ಕಾಡುಗಳಲ್ಲಿ ಹಲ್ಲಿಗಳು ಇರುವುದರಿಂದ ಬೆಳೆಗಳ ರಕ್ಷಣೆಗೆ ಪೂರಕ. ಅದೊಂದು ರೀತಿ ಆರ್ಥಿಕ ಬಲ ಎನ್ನಲೇಬೇಕು ಎನ್ನುವುದು ಅವರ ವಾದ. ಆಗ ಯೋಚನೆ ಬಂತು. ಹಾಗಾದರೆ ಯಾರಾದರೂ ಒಂದು ಹಲ್ಲಿ ನರ್ಸರಿ ಮಾಡಿ, ಸರ್ಕಾರದಿಂದ ನಿಯಮ ತಂದು ಪ್ರತಿಯೊಬ್ಬರ ಮನೆಯಲ್ಲೂ ಕನಿಷ್ಠ ಎರಡೆರಡು